ದಿನಾಂಕ 09-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ</u>**

7. ರಾಮಾಪುರ ಗ್ರಾಮದ ಆಸ್ತಿ ಸಂಃ 45/ಬಿ ಆಸ್ತಿಯ ಕ್ರಮ ಸಂಖ್ಯೆ 71 ಎಂದರೆ ಸರಿ. ಅದೇ ಗ್ರಾಮದ ಆಸ್ತಿ ಸಂಃ 45/ಸಿ ಆಸ್ತಿಯು ನಕಲಪ್ಪ ತಂದೆ ಗುರುಲಿಂಗಪ್ಪ ನಿಂಬಣ್ಣನವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ವಿಪಿಸಿ ಸಂಃ 45/ಸಿ ಆಸ್ತಿಯ ಕ್ರಮ ಸಂಖ್ಯೆ 72 ಎಂದರೆ ಗೊತ್ತಿಲ್ಲ. ಸದರಿ ನಕಲಪ್ಪ ನಿಂಬಣ್ಣನವರ ನನ್ನ ಸಂಬಂಧಿ ಎಂದರೆ ಸರಿ. ಅವರ ಸದರಿ ಆಸ್ತಿಯ ಬಗ್ಗೆ ನನಗೆ ತಿಳಿದಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಸಂಃ 44/ಎ ರಿಂದ ಆಸ್ತಿ ಸಂಃ 46 ರವರೆಗೂ ಎಲ್ಲಾ ಆಸ್ತಿಗಳು ರಾಮಾಪುರ ಗ್ರಾಮದ ಸರಕಾರಿ ಶಾಲೆಯ ಮುಂದೆ ಇರುವ ಡಾಂಬರ್ ರಸ್ತೆಯ ಎದುರುಗಡೆ ಇರುವ ಜಾಗದಲ್ಲಿ ಸಾಲಿನಲ್ಲಿ ಬರುತ್ತವೆ ಎಂದರೆ ಗೊತ್ತಿಲ್ಲ. ಸದರಿ ಸಾಲಿನಲ್ಲಿಯೇ ವಾದಿಯು ಆಧರಿಸಿರುವ ಆಸ್ತಿ ಸಂಃ 45/ಎ ಮತ್ತು 45/ಎ 1 ಬರುತ್ತವೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳು ಮೇಲೆ ನಮೂದಿಸಿದ ಸಾಲಿನ ಆಸ್ತಿಗಳಲ್ಲಿಯೇ ಬಂದರೂ ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ರಾಮಾಪುರ ಗ್ರಾಮದಲ್ಲಿ ಸರಕಾರಿ ಶಾಲೆ ಇದೆ ಎಂದರೆ ಸರಿ. ಸಾಕ್ಷಿಗೆ ಆಸ್ತಿ ಸಂಃ 1 ಮತ್ತು ಅದರ ಕ್ರಮ ಸಂಖ್ಯೆ 1 ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ತೋರಿಸಿ ಸದರಿ ಆಸ್ತಿಯ ಜಾಗದಲ್ಲಿ ರಾಮಾಪುರ ಗ್ರಾಮದ ಸರಕಾರಿ ಶಾಲೆಯಲ್ಲಿ ಸದರಿ ಆಸ್ತಿ ಇದೆ ಎಂದರೆ ಸರಿ ಎಂದು ನುಡಿದು, ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಸರಕಾರಿ ಶಾಲೆ ವಿಪಿಸಿ ಆಸ್ತಿ ಸಂಖ್ಯೆ 1 ರಲ್ಲಿ ಇದೆ ಎಂದು ನಮೂದಿಸಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಶಾಲೆಯ ಪಶ್ಚಿಮ ದಿಕ್ಕಿನ ಉತ್ತರ

ಭಾಗಕ್ಕೆ ರಾಮಾಪುರ ಗ್ರಾಮದ ಅಂಗನವಾಡಿ ಇದೆ ಎಂದರೆ ಸರಿ. ಸದರಿ ಅಂಗನವಾಡಿಯ ಆಸ್ತಿ ಸಃ 1/1 ಮತ್ತು ಕ್ರಮ ಸಂಖ್ಯೆ 2 ಎಂದರೆ ಸರಿ. ಸಾಕ್ಷಿಗೆ ಆಸ್ತಿ ಸಂಃ3 ಮತ್ತು ಕ್ರಮ ಸಂಖ್ಯೆ 4 ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ 2 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದು, ಮುಂದುವರೆದು 2 ನೇ ಪ್ರತಿವಾದಿಯ ಆಸ್ತಿಯು ಯಾವ ನಂಬರಿನಲ್ಲಿ ಬರುತ್ತದೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೆ ಸೇರಿದ ಆಸ್ತಿ ಸಂಃ 3 ಎಂದರೆ ಗೊತ್ತಿಲ್ಲ. ನನಗೆ 2 ನೇ ಪ್ರತಿವಾದಿಯ ಆಸ್ತಿಯ ಬಗ್ಗೆ ತಿಳಿದಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಗ್ರಾಮದ ಹುಸೇನಸಾಬ ತಂದೆ ಹಸನಸಾಬ ದ್ಯಾಮನಕೊಪ್ಪ ವ್ಯಕ್ತಿಯ ಪರಿಚಯ ಇದೆ. ಸದರಿ ವ್ಯಕ್ತಿಯ ಮನೆಯು 2 ನೇ ಪ್ರತಿವಾದಿ ಮನೆಯ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ಸದರಿ ಹುಸೇನಸಾಬ ದ್ಯಾಮನಕೊಪ್ಪ ರವರ ಮನೆಯ ಆಸ್ತಿ ಸಂಃ 4 ಎಂದರೆ ಸರಿ. ಸದರಿ ಆಸ್ತಿಯ ಕ್ರಮ ಸಂಖ್ಯೆ 5 ಎಂದರೆ ಗೊತ್ತಿಲ್ಲ. ನನಗೆ ಸದರಿ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆ ಕೃಷಿ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನ್ನ ತಂದೆ ಎತ್ತುಗಳು ಮತ್ತು ಕೃಷಿ ಉಪಕರಣಗಳನ್ನು ಉಪಯೋಗಿಸುವುದಿಲ್ಲ ಎಂದರೆ ಸರಿ. ನಾವು ದನದ ಕೊಟ್ಟಿಗೆಯನ್ನು ಹೊಂದಿಲ್ಲ ಎಂದರೆ ಸರಿ. ನನ್ನ ತಂದೆ ಖಾಯಂ ಆಗಿ ಹಾನಗಲ್ಲ ತಾಲೂಕಿನ ಸಾವಿಕೇರಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಈಗಲೂ ನಾನು ರಾಮಾಪುರ ಗ್ರಾಮದಲ್ಲಿಯೇ ವಾಸವಿದ್ದೇನೆ. ನಾನು ಮತ್ತು ನನ್ನ ಪೋಷಕರು ಕಳೆದ 6 ವರ್ಷಗಳಿಂದಲೂ ಬಂಕಾಪುರದ ರೇಣುಕಾದೇವಿ ಸಿನಿಮಾ ಟಾಕೀಸಿನ ಸುತ್ತಮುತ್ತಲ ಸ್ಥಳದಲ್ಲಿ ಬಾಡಿಗೆ ಆಧಾರದ ಮೇಲೆ ವಾಸವಿದ್ದೇನೆ ಎಂದರೆ ಸರಿ. ಅದರ ಪೂರ್ವದಲ್ಲಿ ನನ್ನ ಸಹೋದರಿಯರನ್ನು ಮದುವೆ ಮಾಡಿಕೊಟ್ಟಿರುವ ಗ್ರಾಮವಾದ ಮಾಸನಕಟ್ಟೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ.

ಮೊದಲಿಗೆ ಮಾಸನಕಟ್ಟಿ ಗ್ರಾಮದಲ್ಲಿ ಮತ್ತು ನಂತರದಲ್ಲಿ ಬಂಕಾಪುರದಲ್ಲಿ ಬಾಡಿಗೆ ಆಧಾರದ ಮೇಲೆ ನಾನು ಮತ್ತು ನನ್ನ ಪೋಷಕರು ವಾಸವಿದ್ದರೂ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿಗಳಾದ ಜಿ.ಪಿ.ಸಿ ಸಂಃ 45/ಎ ಆಸ್ತಿ ಮತ್ತು ಜಿ.ಪಿ.ಸಿ ಸಂಃ45/ಎ 1 ರ ಆಸ್ತಿಗಳನ್ನು ಕ್ರಮವಾಗಿ 1 ಮತ್ತು 2 ನೇ ವಾದಿಯರ ಹೆಸರಿಗೆ ಸರಕಾರವು ಮಂಜೂರು ಮಾಡಿದ ಬಗ್ಗೆ ಹಕ್ಕು ಪತ್ರಗಳನ್ನು ಹಾಜರುಪಡಿಸಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ಗ್ರಾಮ ಪಂಚಾಯಿತಿ ಠರಾವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳ ಪೈಕಿ ಯಾವುದೇ ಠರಾವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಜಿ.ಪಿ.ಸಿ ಸಂಃ45/ಎ ಮತ್ತು ಜಿ.ಪಿ.ಸಿ ಸಂಃ45/ಎ 1 ರ ಆಸ್ತಿಗಳಲ್ಲಿ ಇದ್ದ ಮನೆಗಳು ಬಿದ್ದಾಗ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಪಿ.ಡಿ.ಓ ರವರು ತಹಶೀಲ್ದಾರವರಿಗೆ ಸಲ್ಲಿಸಿದ ವರದಿಯಲ್ಲಿ ಸದರಿ ಆಸ್ತಿಗಳಲ್ಲಿ ಯಾರೂ ವಾಸ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನಾನಾಗಲೀ ಅಥವಾ ನನ್ನ ಪೋಷಕರಾಗಲೀ ವಾಸವಿಲ್ಲದಿದ್ದರೂ ಸದರಿ ವರದಿಯನ್ನು ತಹಶೀಲ್ದಾರವರಿಗೆ ಸಲ್ಲಿಸಿದ ನಂತರ, ಸರಕಾರದಿಂದ ಬರುವ ಹಣಕಾಸಿನ ಸೌಲಭ್ಯವನ್ನು ಮೋಸದಿಂದ ಪಡೆಯಲು ವರದಿಯನ್ನು ಅಧಿಕಾರಿಗಳೊಂದಿಗೆ ಮಿಲಾಪಿ ಆಗಿ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವರದಿಯು ತಿದ್ದುಪಡಿ ಆದ ಕಾರಣಕ್ಕೆ ಮತ್ತು ಪಿ.ಡಿ.ಓ ರವರು ನೀಡಿದ ವರದಿಯಂತೆ ದಾವಾ ಆಸ್ತಿಗಳಲ್ಲಿ ಯಾರೂ ವಾಸವಿಲ್ಲದ ಕಾರಣ ನಮಗೆ ಸರಕಾರವು ಹಣಕಾಸಿನ ಸೌಲಭ್ಯವನ್ನು ಮಂಜೂರು ಮಾಡಿಲ್ಲ ಎಂದರೆ ಸಾಕ್ಷಿಯು ಹಣಕಾಸಿನ ಸೌಲಭ್ಯವು ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಅತಿವೃಷ್ಟಿಯಿಂದ ಬಿದ್ದ ಮನೆಗಳಲ್ಲಿ ನಾವು ವಾಸ ಇರದ ಕಾರಣಕ್ಕೆ ಮತ್ತು ಸರಕಾರದಿಂದ

ಹಣಕಾಸಿನ ಸೌಲಭ್ಯ ಮಂಜೂರು ಆಗದೇ ಇರುವುದರಿಂದ ಇಂದಿಗೂ ಸಹ ನಾವು ಬಂಕಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ.

11. ದಾವಾ ಆಸ್ತಿಗಳ ಸಂಃ45 ಮತ್ತು ಪ್ರತಿವಾದಿಗೆ ಸೇರಿದ ಆಸ್ತಿ ಸಂಃ 3 ಇರುವುದರಿಂದ ಸದರಿ ಆಸ್ತಿಗಳ ನಡುವೆ ಸುಮಾರು 40 ರಿಂದ 41 ಆಸ್ತಿಗಳ ವ್ಯತ್ಯಾಸ ಇರುವುದರಿಂದ ನಮ್ಮ ಆಸ್ತಿಗೂ ಮತ್ತು 2 ನೇ ಪ್ರತಿವಾದಿ ಆಸ್ತಿಗೂ ಸಾಕಷ್ಟು ದೂರ ಇದ್ದು, ದಾವಾ ಆಸ್ತಿಗಳಿಗೆ ವಹಿವಾಟು ಮಾಡಲು ಪ್ರತಿವಾದಿಗಳು ತೊಂದರೆ ನೀಡುವ ಸಂದರ್ಭ ಇಲ್ಲ ಎಂದರೆ ಸರಿಯಲ್ಲ. ರಾಮಾಪುರ ಗ್ರಾಮದ ಸರಕಾರಿ ಶಾಲೆಯ ಎದುರುಬದಿಯಲ್ಲಿ ಸರಕಾರಿ ರಸ್ತೆಯ ಉತ್ತರ ದಿಕ್ಕಿಗೆ ನಮ್ಮ ಆಸ್ತಿಗಳು ಇದ್ದು ಮತ್ತು ದಕ್ಷಿಣ ದಿಕ್ಕಿಗೆ ಪ್ರತಿವಾದಿಗಳ ಆಸ್ತಿ ಇರುತ್ತವೆ ಎಂದರೆ ಸರಿಯಲ್ಲ. ವಾದಿಗಳ ಮತ್ತು ಪ್ರತಿವಾದಿಗಳ ಆಸ್ತಿಗಳನ್ನು ಸದರಿ ಸರಕಾರಿ ಡಾಂಬರ ರಸ್ತೆಯು ಬೇರ್ಪಡಿಸುವುದರಿಂದ ವಾದಿಗಳ ಆಸ್ತಿಗಳನ್ನು ವಹಿವಾಟು ಮಾಡಲು ಪ್ರತಿವಾದಿಗಳು ತೊಂದರೆ ನೀಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ತೊಂದರೆ ನೀಡದಿದ್ದರೂ ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ